ಶ್ರೀ ಎಸ್. ಎಂ. ಕೃಷ್ಣ.— ಅದಕ್ಕೆ ನೋಟೀಸ್ ಬೇಕು.

Sri DODDATHIMMAIAH.—Would you kindly let us know whether you have got any machinery to conduct survey of these industrial potentialities ?

Sri S. M KRISHNA.—I have already submitted to the House that every year we conduct surveys taking certain Districts and in certain cases we get reports upto-date. The suggestions given in answers to questions (*a*) and (*b*) are the basis on the report of the survey.

Sri D. B. KALMANKAR.—If no individual or private concern is coming forward, I want to know whether the Government has got a policy to give assistance and see that these industries are started ?

Sri S. M. KRISHNA.—I wish to give assistance, but due to financial constraints it cannot be done.

SHIFTING OF TODDY SHOPS FROM HARIJAN LOCALITIES

228. Sri K. SIDDAIAH (Santhemarahally).—

Will the Chief Minister be pleased to state :—

(a) the criteria adopted by Government for locating toddy shops in the State ;

(b) whether the Government is aware of the fact that most of the toddy shops are situated in Harijan localities or in their vicinity ;

(c) whether the Government would consider immediately to shift the toddy shops away from Harijan localities ?

Sri D. DEVARAJ URS (Chief Minister).—

(a) The criteria adopted by the Government for locating toddy shops is that before the issue of licences, the Deputy Commissioners concerned will verify the sites and boundaries furnished by the licensees for the location of shops bearing in mind the condition No. 20 of the Sale Notification (i.e., the shops should not be located nearer to Railway Stations, Educational and Religious Institutions and Harijan localities etc.)

(b) No.

(c) The member may bring to the notice of Government, if there are any such instances when it would be possible for Government to consider the matter.

ಶ್ರೀ ಕೆ. ಸಿದ್ದಯ್ಯ.— ಸ್ವಾಮಿ, (ಅ)ಗೆ ಉತ್ತರವಾಗಿ ಹೆಂಡದ ಅಂಗಡಿಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದ ಮಾರಾಟದ ಅಧಿಸೂಚನೆಯ 20ನೇ ಪರತ್ತನ್ನು ಎಂದರೆ ಸದರಿ ಅಂಗಡಿಯು ರೈಲ್ವೆ ನಿಲ್ದಾಣ, ಶಿಕ್ಷಣ, ಹಾಗೂ ಧಾರ್ಮಿಕ ಸಂಸ್ಥೆ ಮತ್ತು ಹರಿಜನ ವಾಸಸ್ಥಾನ ಇತ್ಯಾದಿಗಳ ಬಳಿ ಇರಕೂಡದೆಂಬ ಪರತ್ತನ್ನು ಗಮನಿಸಿ ಪರವಾನೆದಾರರು ಒದಗಿಸಿದ ಮಾಹಿತಿಯ ಮೇರೆಗೆ ಸಂಬಂಧ

(ಶ್ರೀ ಕೆ. ಸಿದ್ದಯ್ಯ)

ಪಟ್ಟಣ ಜಿಲ್ಲಾಧಿಕಾರಿಗಳು ನಿವೇಶನ ಹಾಗೂ ಗಡಿಗಳನ್ನು ಆ ಬಗ್ಗೆ ಪರವಾನೆ ನೀಡುವ ಮುನ್ನ ಪರಿಶೀಲಿಸುವುದೇ ಸರ್ಕಾರದವರು ಅನುಸರಿಸುತ್ತಿರುವ ಆಧಾರಾಂಶವಾಗಿದೆ ಎಂದು ಹೇಳಿದ್ದೀರಿ. ಈ ಬಗ್ಗೆ ನಾನು ಕೇಳುವುದು ಏನೆಂದರೆ ಜಿಲ್ಲಾಧಿಕಾರಿಗಳು ಇದನ್ನೆಲ್ಲಾ ನೋಡಿ ಲೈಸನ್ಸ್ ಕೊಡುವಾಗ ರೆಕಾರ್ಡ್‌ನ್ನು ವೆರಿಫೈ ಮಾಡಿ ಇನ್‌ಫರ್ಮೇಷನ್ ತರಿಸಿಕೊಂಡು ಲೈಸನ್ಸ್ ಕೊಡುತ್ತಾರೆಯೇ ಅಥವಾ ನಿವೇಶನವನ್ನು ನೋಡಿ ಲೈಸನ್ಸ್ ನೀಡುತ್ತಾರೆಯೇ ?

† ಶ್ರೀ ಡಿ. ದೇವರಾಜ ಅರಸ್.—ರಿಕಾರ್ಡ್‌ನ್ನು ವೆರಿಫೈ ಮಾಡಿ ಲೈಸನ್ಸ್ ಕೊಡುತ್ತಾರೆ.

ಶ್ರೀ ಕೆ. ಸಿದ್ದಯ್ಯ.—ಸ್ವಾಮಿ, ಹೆಂಡದ ಅಂಗಡಿಗಳನ್ನು ಸ್ಥಾಪಿಸುವುದಕ್ಕೆ ಪರವಾನೆ ಕೊಡುವಾಗ ರೈಲ್ವೆ ನಿರ್ಮಾಣ, ಶಿಕ್ಷಣ ಹಾಗೂ ಧಾರ್ಮಿಕ ಸಂಸ್ಥೆ ಮತ್ತು ಹರಿಜನ ವಾಸಸ್ಥಾನ ಇತ್ಯಾದಿಗಳ ಹತ್ತಿರ ಇರಕೂಡದು ಎಂದು ಹೇಳಿದ್ದೀರಿ. ಹಾಗಾದರೆ ಅವು ಎಷ್ಟು ದೂರ ಇರಬೇಕು ? ಅಂದರೆ 1 ಮೈಲಿಯೋ ಅಥವಾ 2 ಮೈಲಿ ದೂರದಲ್ಲಿ ಇರಬೇಕು ಎಂದು ಮಾಡಿದ್ದೀರಾ ?

Sri D. DEVARAJ URS.—Distance is not prescribed. But they should not be close to them.

ಶ್ರೀ ಟಿ. ಎಂ. ಮಂಜುನಾಥ್. — ಸ್ವಾಮಿ, ಹೆಂಡದ ಅಂಗಡಿಗಳನ್ನು ಸ್ಥಾಪಿಸುವಾಗ ರೈಲ್ವೆ ನಿರ್ಮಾಣ, ಶಿಕ್ಷಣ ಹಾಗೂ ಧಾರ್ಮಿಕ ಸಂಸ್ಥೆ ಮತ್ತು ಹರಿಜನ ವಾಸಸ್ಥಾನ ಇವುಗಳ ಹತ್ತಿರ ಇರಕೂಡದು, ಸ್ವಲ್ಪ ದೂರ ಇರಬೇಕು ಎಂದು ಆದೇಶ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಪಟ್ಟಣವು ಒಳಗಡೆ ಈ ಹೆಂಡದ ಅಂಗಡಿಗಳನ್ನು ಸ್ಥಾಪಿಸುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಅಲ್ಲಿ ಜನಗಳು ನೆಮ್ಮದಿಯಿಂದ ವಾಸ ಮಾಡುವುದಕ್ಕೆ ತೊಂದರೆಯಾಗಿದೆ. ಆದುದರಿಂದ ಆ ಅಂಗಡಿಗಳನ್ನು ಒಂದು ಫರ್ಲಾಂಗ್ ದೂರವೋ, ಎರಡು ಫರ್ಲಾಂಗ್ ದೂರವೋ ಇಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮೊದಲು ಅದು ಊರ ಹೊರಗಡೆಯೇ ಇತ್ತು. ಈಗ ಆ ಊರುಗಳೆಲ್ಲಾ ಬೆಳೆದಿರುವುದರಿಂದ ಅದು ಪಟ್ಟಣದ ಮಧ್ಯೆ ಬಂದುಬಿಟ್ಟಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ಪಡಖಾನೆಗಳು ಅನೇಕ ಸ್ಥಳದಲ್ಲಿ ಪಂಚಾಯಿತಿ ಹಾರ್ ಒಳಗಡೆ ಇದೆ. ಈಗ ನಮ್ಮ ಕಡೆಯ ಹೊನ್ನಾಳಿ ತಾಲ್ಲೂಕಿನ ಸೋಸಲೆ ಸ್ಥಳದಲ್ಲಿ ತೆಗೆದುಕೊಂಡರೆ ಆ ಪಡಖಾನೆ ಊರು ಒಳಗಡೆ ಇದೆ, ನ್ಯಾಮ್ಪಿಯಲ್ಲಿ ತೆಗೆದುಕೊಂಡರೆ ಟೌನ್ ಮಧ್ಯೆ ಪಡಖಾನೆ ಅಂಗಡಿ ಇದೆ. ಹೀಗಿರುವುದರಿಂದ ತಾವು ಇದರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ತಾವು ಆ ಬಗ್ಗೆ ವಿವರಣೆ ತಿಳಿಸಿದರೆ ಅದನ್ನು ಆ ಜಾಗದಿಂದ ಷಿಫ್ಟ್ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಹೆಂಡದ ಅಂಗಡಿಗಳು ಕೆಲವು ಶಾಲೆಗಳ ಸಮೀಪದಲ್ಲಿ ಇರುವುದರಿಂದ ಅದನ್ನು ಆ ಸ್ಥಳದಿಂದ ಬೇರೆ ಕಡೆಗೆ ಇಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಈಗ ಏನಾಗಿದೆ ಎಂದರೆ ಎಷ್ಟೋ ಕಡೆ ಊರುಗಳು ಮೊದಲಿಗಿಂತ ಜಾಸ್ತಿ ಬೆಳೆದುಬಿಟ್ಟಿರುವುದರಿಂದ ಮೊದಲು ಯಾವ ಜಾಗದಲ್ಲಿ ಹೆಂಡದ ಅಂಗಡಿಯನ್ನು ಹಾಕಿದ್ದರೋ ಆ ಜಾಗದಲ್ಲೇ ಸುಂದುವರಿಯುತ್ತಿರುವುದರಿಂದ ಅವು ಊರು ಮಧ್ಯೆ ಬಂದ ಹಾಗೆ ಕಾಣುತ್ತದೆ. ಇದನ್ನು ಕಾಲಕ್ರಮೇಣ ಷಿಫ್ಟ್ ಮಾಡಬೇಕು. A lot of local pressure is coming to our notice now. Gradually they are being shifted.

ಶ್ರೀ ಕೊಣಂದೂರು ಲಿಂಗಪ್ಪ.—ಸ್ವಾಮಿ, ಸೇಂದಿ ಅಂಗಡಿಗಳು ಶಾಲಾ ಹತ್ತಿರ ಇರುವುದರಿಂದ ಪ್ರೈಮರಿ ಶಾಲಾ ಮಕ್ಕಳ ಮನಸ್ಸಿನ ಮೇಲೆ ಒಂದು ಕೆಟ್ಟ ಪರಿಣಾಮವಾಗುತ್ತದೆ. ಉದಾಹರಣೆಗೆ ದಕ್ಷಿಣಕನ್ನಡ ಜಿಲ್ಲೆ ತೆಗೆದುಕೊಂಡರೆ ಉಪ್ಪಿನ ಅಂಗಡಿ, ಬೆಲ್ಲದ ಅಂಗಡಿ ಸ್ಥಳದಲ್ಲಿರುವ ಸೇಂದಿ ಅಂಗಡಿಗಳು ಪ್ರೈಮರಿ ಶಾಲೆಯ ಹತ್ತಿರ ಇರುವುದರಿಂದ ಆ ಸೇಂದಿ ಅಂಗಡಿಯ ಮೇಲೆ ಕೆಂಪು ಬಣ್ಣ ಮತ್ತು ಬಿಳಿ ಅಕ್ಷರದಲ್ಲಿ ದಪ್ಪನಾಗಿ ಬರೆದು ಇರುವುದರಿಂದ ಆ ಮಕ್ಕಳ ಮನಸ್ಸಿನ ಮೇಲೆ ಒಂದು ರೀತಿಯ ದುಷ್ಪರಿಣಾಮ ಉಂಟಾಗುತ್ತದೆ. ಆದುದರಿಂದ ಅದನ್ನು ದಪ್ಪ ಅಕ್ಷರದಲ್ಲಿ ಬರೆಸುವ ಬದಲು ಸಣ್ಣ ಅಕ್ಷರದಲ್ಲಿ ಬರೆಸಿದರೆ ಸ್ವಲ್ಪ ಉತ್ತಮವಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಸೇಂದಿ ಅಂಗಡಿ ಮೇಲೆ ಹೇಗೆ ಬರೆಸಬೇಕು ಎನ್ನುವುದನ್ನು ನೋಡೋಣ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಮುಖ್ಯಮಂತ್ರಿಗಳು (ಅ)ಗೆ ಉತ್ತರವಾಗಿ ಗೊತ್ತಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಅಂಕಿಸಂಖ್ಯೆಗಳಲ್ಲಿ ಇದೆ ಎನ್ನುವುದು ಅರ್ಥವಾಗುತ್ತದೆ. ರಾಜ್ಯದಲ್ಲಿ ಇರತಕ್ಕಂಥ ಹೆಂಡದ ಅಂಗಡಿಗಳು ಎಷ್ಟು ? ಅದರಲ್ಲಿ ಹರಿಜನ ಲೊಕ್ಯಾಲಿಟಿಯಲ್ಲಿ ಇರುವುದೆಷ್ಟು ? ಏತಕೆ ಂದರೆ ಹರಿಜನ ಲೊಕ್ಯಾಲಿಟಿಯಲ್ಲಿರುವ ಸೇಂದಿ ಅಂಗಡಿಗಳನ್ನು ಬೇರೆ ಕಡೆಗೆ ವರ್ಗಾಯಿಸಬೇಕು ಎನ್ನುವ ಒಂದು ಸರ್ಕಾರದ ಆದೇಶವನ್ನು ಸರ್ಕಾರದವರು ಸಂಬಂಧಪಟ್ಟ ಇಲಾಖೆಯವರಿಗೆ ಕೊಟ್ಟಿದ್ದರೂ ಕೂಡ ಅದನ್ನು ಅವರು ಪರಿಗಣಿಸಿಲ್ಲ. ಆ ರೀತಿ ಪರಿಗಣಿಸದೇ ಹೋದರೆ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇದಕ್ಕೆ ನಮ್ಮ ಅಭಿಪ್ರಾಯ ವೇನು ?

ಶ್ರೀ ಡಿ. ದೇವರಾಜ ಅರಸ್.—ಅವರು ಒಂದು ವೇಳೆ ಸರ್ಕಾರದ ಆದೇಶವನ್ನು ಪರಿಗಣಿಸದೇ ಹೋದರೆ We will have to take action and see that they should act according to the provisions of the circular issued.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಸ್ವಾಮಿ, ಈಗತಾನೇ ತಾವು ಹೇಳಿದ್ದೀರಿ. ನಾನು ಕೇಳುವುದು ಏನೆಂದರೆ ದಂಡು ಪ್ರದೇಶದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಹೆಂಡದ ಅಂಗಡಿ, ಸಾರಾಯಿ ಅಂಗಡಿ ಮತ್ತು ಬೀರ್ ಅಂಗಡಿ ಒಂದು ಸಾರ್ವಜನಿಕ ಕ್ಷೇತ್ರದ ಮಧ್ಯದಲ್ಲಿ ಇರುವುದರಿಂದ ಈ ಬಗ್ಗೆ ಸಾರ್ವಜನಿಕರಿಂದ ಮನವಿ ಪತ್ರಗಳು ಬಂದಿಲ್ಲವೇ ? ಒಂದು ವೇಳೆ ಅವರಿಂದ ಮನವಿ ಪತ್ರಗಳು ಬಂದಿದ್ದರೆ ಅದನ್ನು ಬೇರೆ ಕಡೆ ವರ್ಗಾಯಿಸುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ಅವರಿಂದ ದೂರು ಬಂದಿದೆ. ಅದನ್ನು ನೋಡಿ ಸುತ್ತಾ ಇದ್ದೇನೆ. ಅವರ ಮೇಲೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಸಿದ್ದಯ್ಯ.—ಇದರಲ್ಲಿ ಏನಾಗಿದೆ ಎಂದರೆ ಕೆಲವು ಅಂಗಡಿಗಳನ್ನು ಬೇರೆ ಕಡೆ ತೆಗೆಯುವುದಕ್ಕೆ ಕಷ್ಟವಾಗುತ್ತದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಖಾಯಂ ಕಟ್ಟಿಡ ಇದ್ದರೆ ಅದನ್ನು ತಾತ್ಕಾಲಿಕವಾಗಿ ಬೇರೆ ಕಡೆ ವರ್ಗಾಯಿಸಬೇಕಾದರೆ ಕಷ್ಟವಾಗುತ್ತದೆ. ಆದರೆ ಹಳ್ಳಿಗಾಡಿನಲ್ಲಿರತಕ್ಕಂಥ ಹೆಂಡದ ಅಂಗಡಿಗಳು ಮುಚ್ಚಾಳೆ ಷೆಡ್ಡುಗಳಲ್ಲಿ ಇರುವುದರಿಂದ ಅವನ್ನು ಪರಿಶೀಲಿಸಿ ಬೇರೆ ಕಡೆಗೆ ವರ್ಗ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.— ಅದನ್ನು ಮಾಡಿಕೊಣ.

CLOSURE OF CASHEW PROCESSING FACTORIES IN S. K. DISTRICT.

248. Sri B. V. KAKKILAYA (Buntwal).—

Will the Minister for Industries and Parliamentary Affairs be pleased to state :—

(a) whether the cashew processing factories in South Kanara District were closed in December 1973 and January 1974 because of non-availability of imported raw cashewnuts ;

(b) if so, the number of workers rendered unemployed and the number of man-days lost due to the closure ;

(c) how many of the closed factories still remain closed and the number of workers out of work ;